**ವ್ಯಾಖ್ಯಾನ**

# ಹುಟ್ಟುವ ಭೀತಿ ಹೊಂದುವ ಭೀತಿ

ಉಗಾಭೋಗದ ಚಿಂತನೆ:

**ಹುಟ್ಟುವ ಭೀತಿ ಹೊಂದುವ ಭೀತಿ**

**ವಿಠ್ಠಲನಂಘ್ರಿಯ ನೆನೆಯದವರಿಗೆ**

**ಕಾಲನ ಭೀತಿ ಕರ್ಮದ ಭೀತಿ**

**ಗೋಪಾಲನ ದಾಸನಾಗದವನಿಗೆ**

**ಅರಿಷಡ್ವರ್ಗದ ಮಹಾಭೀತಿ**

**ಶ್ರೀ ಹರಿ ನಾಮವನುಚ್ಚರಿಸದವಗೆ**

**ಹಲವು ಮಾತಿನ್ನೇನನು ಹಲವು ಭೀತಿ**

**ಚೆಲುವ ಪುರಂದರ ವಿಠಲನ್ನ ಪೂಜಿಸದವಗೆ**

ಬ್ರಹ್ಮಸೂತ್ರ ಭಾಷ್ಯದ ತೃತೀಯಾಧ್ಯಾಯವಾದ ಸಾಧನಾಧ್ಯಾದ ಪ್ರಥಮ ಪಾದವಾದ ವೈರ್ಗ್ಯ ಪಾದದ ಸೂತ್ರಗಳಲ್ಲಿ, ದೇಹಧಾರಿಯಾದ ಜೀವನು ಮತ್ತೆ ಮತ್ತೆ ಹುಟ್ಟುವುದುರಿಂದ ದು:ಖ ರೂಪದ ಭೌತಿಕದಿಂದ ಯುಕ್ತನಾಗಿ ನೈಜಸುಖ ಹೊಂದಲು ವೈರಾಗ್ಯ ಸಾಧನ ವೈಶಿಷ್ಟ್ಯವನ್ನು ಹೇಳುತ್ತಾರೆ.

ಇದನ್ನೇ ಪುರಂದರ ದಾಸರು ತಮ್ಮ ಈ ಉಗಾಭೋಗದಲ್ಲಿ ಹಿಡಿದಿಟ್ಟಿದ್ದಾರೆ.

ದೇವರನ್ನು ನಂಬಿ ಬ್ರಹ್ಮ ಜಿಜ್ಞಾಸೆಯನ್ನು (ಶ್ರವಣ ಮನನ ನಿಧಿಧ್ಯಾಸನ) ಮಾಡುತ್ತ ಭಗತ್ಪ್ರೀತಿಗಳಿಸಿ ನೈಜ ಸುಖವನ್ನು ಪಡೆಯಬೇಕು. ಆದರೆ ಹರಿಯನ್ನು ನಂಬದವ ಸಂಸಾರಕ್ಕೆ ಮತ್ತೆ ಮತ್ತೆ ಬಂದು ಕಾಲ ಮತ್ತು ಕರ್ಮದ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಾನೆ ಎಂದು ಹೇಳುತ್ತ ಹರಿಯನ್ನು ನಂಬಿ ಭಜಿಸಿರಿ ಎಂದು ಹೇಳುತ್ತಾರೆ.

ಇದನ್ನೇ ಕಾಖಂಡಕಿಯ ಶ್ರೀ ಕೃಷ್ಣದಾಸರು

**"ನಂಬಿ ಭಜಿಸುವುದು ಬಲು ಲೇಸು/ಕೃಷ್ಣನ ಚರಣ ಶ್ರೀ ಕೃಷ್ಣನ ಚರಣ //** ಎನ್ನುತ್ತಾರೆ

ದೇಹಧಾರಿಯಾದ ಜೀವನಿಗೆ ಪ್ರಯತ್ನವಿಲ್ಲದೇ ಮರಣವು ಬರುವುದರಿಂದ ಮತ್ತು ಮರಣವೇ ಭೂತಗಳಿಂದ ಮೋಕ್ಷವೆಂದು ಸ್ಮೃತಿ ಇರುವುದರಿಂದ ಮರಳಿ ಹುಟ್ಟುವ ಪ್ರಸಂಗವೇ ಇಲ್ಲ. ಹುಟ್ಟುವ ಭೀತಿ ಎಲ್ಲಿದೆ? ಎನ್ನುವವರಿಗೆ ---

ಛಾಂದೋಗ್ಯ ಉಪನಿಷತ್ತಿನಲ್ಲಿ, ಪ್ರವಹಣ ರಾಜನು ಶ್ವೇತಕೇತುವಿಗೆ ಮರಣಾನಂತರ ಜೀವಿಯ ಗತಿಯೇನು? ಎಂದು ಕೇಳಿದಾಗ, ನನಗೆ ಗೊತ್ತಿಲ್ಲ ನೀವೇ ಉಪದೇಶಿಸಬೇಕು ಎಂದು ಹೇಳುತ್ತಾನೆ.
ಆಗ ಆ ರಾಜನು -- ಐದು ಖಂಡಗಳಿಂದ ಜೀವನು ದೇಹತ್ಯಾಗ ರೂಪದ ಮರಣದಲ್ಲಿಯೂ ಸೂಕ್ಷ್ಮ ಭೂತಗಳಿಂದ ಒಡಗೂಡಿಯೇ ಹೋಗುತ್ತಾನೆ.
ಸೂಕ್ಷ್ಮ ಪಂಚಭೂತಗಳಿಂದೊಡಗೂಡಿಯೇ ಸ್ವರ್ಗ ನರಕ ನಂತರ ಆಕಾಶ, ಮೇಘ ,ಭೂ, ತಂದೆಉದರ, ತಾಯಿ ಉದರಗಳಲ್ಲಿ ಸಂಚರಿಸಿ ಮತ್ತೆ ದೇಹ ಪಡೆಯುತ್ತಾನೆ. ಈ ಜನ್ಮ ಮರಣಗಳ ಸಂಕೋಲೆಯಿಂದ ಬಿಡುಗಡೆ ಹೊಂದಬೇಕಾದರೆ ವೈರಾಗ್ಯ ಸಾಧಿಸಬೇಕು ಎಂದು ಹೇಳುತ್ತಾನೆ.

ಇದನ್ನೇ ಶ್ರೀ ಜಗನ್ನಾಥದಾಸರು

**ಜನನಿ ಪಿತ ಭೂ ವಾರಿದಾಂಬರವೆನಿಪ ಪಂಚಾಗ್ನಿಯಲಿ** ....... ಎಂದು ಜೀವ ಸಂಚರಿಸುವ ವಿಷಯವನ್ನು ಹೇಳುತ್ತಾರೆ.

ಶ್ರೀ ಪುರಂದರ ದಾಸರ ಆಂತರ್ಯವೂ ಇದೇ ಆಗಿದೆ.  ಮರಳಿ ಹುಟ್ಟಿಲ್ಲದಂತಾಗಲು ಹುಟ್ಟಿಲ್ಲದವನನ್ನು ನಂಬದಿರಬೇಡಿ ಎನ್ನುತ್ತಾರೆ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ